Status, Pay and Grade of Subject Inspectors and Assistant Superintendent of Physical Education attached to the Deputy Director of Public Instruction in the State.

*Q.—77. Sri B. L. GOWDA.—(Challakere).

Will the Government be pleased to state :—

(*a*) whether there are any posts of Subject Inspectors and Assistant Superintendent of Physical Education attached to the Office of the Deputy Director of Public Instruction in the State ;

(*b*) if so, the status, pay and grade of these officers ;

(*c*) whether they are gazetted or non-gazetted posts ?

A.—Sri S. R. KANTHI (Minister for Education).—

(*a*) yes.

(*b*) Subject Inspectors are Class II Gazetted Officers in the pay scale of Rs. 250—25—350—30—500.

Assistant Superintendents of Physical Education are in Class III (Non-Gazetted) in the scale of Rs. 200—10—320—15—350.

(*c*) The posts of Subject Inspectors are Gazetted (Class II).

The posts of Assistant Superintendent of physical Education are (Class III) non-gazetted.

ಶ್ರೀ ಬಿ. ಎಲ್. ಗೌಡ.—ಎಷ್ಟು ಜನ Subject Inspector ಗಳು ಇದ್ದಾರೆ ? ಯಾವ ಯಾವ ನಬ್ಜೆಕ್ಟುಗಳಿಗೆ ಇರುತ್ತಾರೆ ?

†ಶ್ರೀ ಎಸ್. ಆರ್. ಕಂಠಿ.—ನಾಲ್ಕು ಜನ ಇರುತ್ತಾರೆ. English, Kannada, Mathematics, Science (Humanity group) ಹೀಗೆ ನಾಲ್ಕುತರಹ ಸಬ್‌ಜೆಕ್ಟುಗಳಿಗೆ ಇರುತ್ತಾರೆ.

ಶ್ರೀ ಬಿ. ಎಲ್. ಗೌಡ.—ಅವರ nature of works ಏನು ?

ಶ್ರೀ ಎಸ್. ಆರ್. ಕಂಠಿ.—ಪ್ರತಿಯೊಂದು ಶಾಲೆಗೂ ಹೋಗಿ ಯಾವ ಪ್ರಕಾರ ಆಯಾ ನಬ್ಜೆಕ್ಟುಗಳಲ್ಲಿ ಪಾಠ ಕಲಿಸಿಕೊಡಬೇಕಂಬುದನ್ನು ಹೇಳಿಕೊಡುತ್ತಾರೆ. Instructions ಕೊಡುತ್ತಾರೆ;

ಶ್ರೀ ಬಿ. ಎಲ್. ಗೌಡ.—ದೈಹಿಕ ಶಿಕ್ಷಣದ Assistant Superintendent ರವರ ಕೆಲಸ ಏನು ?

ಶ್ರೀ ಎಸ್. ಆರ್. ಕಂಠಿ.—ದೈಹಿಕ ಶಿಕ್ಷಣ ಕೊಡುವುದು.

ಶ್ರೀ ಬಿ. ಎಲ್. ಗೌಡ.—ತಮ್ಮ ಉತ್ತರದಲ್ಲಿ ಈ ದೈಹಿಕ ಶಿಕ್ಷಣದ Assistant Superintendents ರ ಹುದ್ದೆಗಳು non gazetted ಎಂದು ಹೇಳಿದ್ದೀರಿ. ಈಗ ತುರ್ತುಪರಿಸ್ಥಿತಿ ಇರುವುದರಿಂದ ಆ ಹುದ್ದೆಗಳನ್ನು ಗೆಜೆಟಡ್ ಆಗಿ ಮಾಡುವುದಕ್ಕೆ ಯೋಚನೆ ಮಾಡುತ್ತೀರ ?

ಶ್ರೀ ಎಸ್. ಆರ್. ಕಂಠಿ.—ತುರ್ತುಪರಿಸ್ಥಿತಿ ಎಂದು ಅವರುಗಳನ್ನು ಕ್ಲಾಸ್ II ಆಫೀಸರು ಗಳಾಗಿ ಮಾಡುವುದಕ್ಕಾಗುವುದಿಲ್ಲ. Assistant Superintendents of Physical Education ಹುದ್ದೆಗಳನ್ನು ಜಾಸ್ತಿಮಾಡಿ ಜನಗಳಿಗೆ ಹೆಚ್ಚಿನ ಫಿಸಿಕಲ್ ಎಜುಕೇಷನ್ ಕೊಡುವುದನ್ನು ವಿಚಾರ ಮಾಡಲಾಗುತ್ತದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈ Subject Inspector ಗಳು ಡಿ. ಡಿ. ಪಿ. ಐ. ಆಫೀಸಿನಲ್ಲಿರುತ್ತಾರೆ. ಅವರು ಡಿಸ್ಟ್ರಿಕ್ಟ್ ಲೆವಲ್ಲಿನಲ್ಲಿದ್ದರೆ ಅನುಕೂಲವಾಗುತ್ತದಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅವರು ಡಿ. ಡಿ. ಪಿ. ಐ. ಗೆ ಅಟ್ಯಾಚ್ ಆಗಿದ್ದರೂ, ಪ್ರತಿಯೊಂದು ಜಿಲ್ಲೆಗೂ ಹೋಗಿ ಕೆಲಸ ಮಾಡುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ಈ ನಬ್ಜೆಕ್ಟ್ ಇನ್‌ಸ್ಪೆಕ್ಟರುಗಳಿಗೆ ಡಿವಿಜನಲ್ ಲೆವಲ್ಲಿನಲ್ಲಿ ಅಷ್ಟು ಕೆಲಸವಿಲ್ಲ. ಅವರು ಎಲ್ಲಾಕಡೆ ಇನ್‌ಸ್ಪೆಕ್ಷನ್ನಿಗೆ ಹೋಗಬೇಕಲ್ಲವೇ ? ಒಂದು ವರ್ಷದಲ್ಲಿ ಪ್ರತಿಯೊಂದು ಸ್ಕೂಲಿಗೂ ಹೋಗುವುದಕ್ಕೆ ಸಾಧ್ಯವಿಲ್ಲವೆನ್ನುವುದು ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ತಮ್ಮಂಥವರು ಹೇಳಿದ್ದಾರೆ, ಗಮನದಲ್ಲಿದೆ.

Sri ANNA RAO GANAMUKHI.—May I know whether the Assistant Superintendent of Physical Education has to inspect the work of the Physical Instruction Teacher in the school who happens to be in class III? So, is it not desirable to upgrade these posts ?

Sri S. R. KANTHI.— That is a suggestion for action ; My Hon'ble friend could have himself done it.

Sri G. VENKATAI GOWDA.—May I know the number of these Assistant Superintendents attached to the D. D. P. I. and whether they are inspecting all the schools ?

ಶ್ರೀ ಎಸ್. ಆರ್. ಕಂಠಿ.—ಉತ್ತರದಲ್ಲಿ ಒಬ್ಬರೇ ಎಂದು ಇದೆ.

ಶ್ರೀ ಬಿ. ಎಲ್. ಗೌಡ.—Subject Inspector ಗಳಿಗೆ ಮತ್ತು, Assistant Superintendent of Physical Education ಅವರಿಗೆ, minimum qualification ಏನಿರಬೇಕು ?

ಶ್ರೀ ಎಸ್. ಆರ್. ಕಂಠಿ.—Subject Inspector : ಆ ಸಬ್ಜೆಕ್ಟಿನಲ್ಲಿ ಗ್ರಾಜುಯೇಟ್ ಆಗಿರ ಬೇಕು ಎಂದಿದೆ. Assistant Superintendent of Physical Educations ; Physical Diploma holderಇರಬೇಕು.

Sri G. VENKATAI GOWDA.—Sir, the post of Assistant Superintendent of Physical Education is only one ? Is it possible for one person to inspect the entire schools ?

ಶ್ರೀ ಎಸ್. ಆರ್. ಕಂಠಿ.—ಈ ತೊಂದರೆ ಇದೆ. ಒಬ್ಬರಿಗೆ ಡಿಫರೆಂಟ್ ಡಿವಿಜನ್ನುಗಳಲ್ಲಿ ಇನ್ ಸ್ಪೆಕ್ಟ್ ಮಾಡುವುದು ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಅದನ್ನು ಯೋಚನೆ ಮಾಡುತ್ತಾ ಇದ್ದಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈ ವರೆಗೆ ಸಬ್ಜೆಕ್ಟ್ ಇನ್‌ಸ್ಪೆಕ್ಟರುಗಳು ಏನು ಕೆಲಸಮಾಡಿದ್ದಾರೆ ಎನ್ನುವ ಬಗ್ಗೆ ವರದಿ ತರಿಸಿಕೊಂಡು ಪರಿಶೀಲನೆ ಮಾಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಆ ಕೆಲಸ ಡಿ. ಪಿ. ಐ. ಮಾಡುತ್ತಾರೆ, ಸರ್ಕಾರದವರು ಮಾಡುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈ ಫಿಸಿಕಲ್ ಎಜುಕೇಷನ್ ಡಿಪ್ಲೊಮಾ ಸರ್ಟಿಫಿಕೇಟ್ ಕೊಡುವವರು ಯಾರು ?

ಶ್ರೀ ಎಸ್. ಆರ್. ಕಂಠಿ.—ಇಲ್ಲಿ ಒಂದು ಟ್ರೇನಿಂಗ್ ಕೋರ್ಸ್ ಇದೆ. ಅಲ್ಲಿ ಹೋಗಿ ಕಲಿಯುತ್ತಾರೆ : ಅಲ್ಲಿ ಡಿಪ್ಲೊಮಾ ಕೊಡುತ್ತಾರೆ.

Drinkng Water Wells taken up under R.D. and L.D. Works in Kunigal Taluk.

*Q.—84. **Sri ANDANAIAH** (Kunigal).—

Will the Government be pleased to state :—

(*a*) the number of incompleted drinking water wells taken up under R.D. and L.D. works in Kunigal Taluk (village-war information may be furnished) ;

(*b*) when the works of the said wells commenced ;

(*c*) the reasons for not completing the work of the above wells so far ;

(*d*) the time they required to complete the said works ?

A.—**Sri RAMAKRISHNA HEGDE** (Minister for Co-operation and Development).—

(*a*), (*b*), (*c*) and (*d*) *Vide* statement given below.